ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 633 (615).

ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್ (ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 05-03-2021.

ಉತ್ತರಿಸುವ ಸಚಿವರು : ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ಹಜ್ ಮತ್ತು ವಕ್ಫ್ ಸಚಿವರು.

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ.	ರಾಜ್ಯದಲ್ಲಿ ಇದುವರೆಗೆ ಸರ್ಕಾರದ ಅನುದಾನದಿಂದ ಎಷ್ಟು ಹಜ್ ಭವನಗಳನ್ನು ನಿರ್ಮಿಸಲಾಗಿದೆ: (ಜಿಲ್ಲಾವಾರು ಮಾಹಿತಿ ನೀಡುವುದು)	**ಹಜ್ ಭವನ ಬೆಂಗಳೂರು :** ರಾಜ್ಯ ಸರ್ಕಾರದ ವತಿಯಿಂದ ಹಜ್ ಯಾತ್ರಿಕರಿಗೆ ಹೆಚ್ಚು ಸೌಲಭ್ಯಗಳನ್ನು ಒದಗಿಸಲು ಅನುವಾಗುವಂತೆ ಬೆಂಗಳೂರು ಉತ್ತರ ತಾಲ್ಲೂಕಿನ ಯಲಹಂಕ ಹೋಬಳಿಯ, ತಿರುಮೇನಹಳ್ಳಿಯಲ್ಲಿ ಹಜ್ ಭವನವನ್ನು ನಿರ್ಮಾಣ ಮಾಡಿದ್ದು, ಸದರಿ ಹಜ್ ಭವನದಲ್ಲಿ 2016ನೇ ಹಜ್ ಋತುವಿನಿಂದ ಆಯ್ಕೆಯಾದ ಯಾತ್ರಿಕರಿಗಾಗಿ ಕರ್ನಾಟಕ ರಾಜ್ಯ ಹಜ್ ಸಮಿತಿಯು ಹಜ್ ಕ್ಯಾಂಪ್‌ಗಳನ್ನು ಆಯೋಜಿಸುತ್ತಿರುತ್ತದೆ. **ಮಂಗಳೂರಿನಲ್ಲಿ ಹಜ್ ಭವನದ ನಿರ್ಮಾಣ :** ಮಂಗಳೂರು ತಾಲ್ಲೂಕು, ಕೆಂಜಾರು ಗ್ರಾಮದ ಸ.ನಂ. 99-2ಎಪಿ1 ರಲ್ಲಿ 1.92 ಎಕರೆ ಜಮೀನನ್ನು ಈಗಾಗಲೇ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಹೆಸರಿನಲ್ಲಿ ಸ್ವಾಧೀನಪಡಿಸಿಕೊಂಡು, ಹಜ್ ಭವನದ ನಿರ್ಮಾಣಕ್ಕಾಗಿ ಕಾಯ್ದಿರಿಸಲಾಗಿರುತ್ತದೆ. ಸದರಿ ಜಮೀನಿಗೆ ಕುರಿತಂತೆ ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದಲ್ಲಿ ದೂರು ದಾಖಲಾಗಿದ್ದು. ದಿನಾಂಕ:28-03-2018 ರಂದು ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣವು ಹೊರಡಿಸಿದ ತನ್ನ ಆದೇಶದಲ್ಲಿ ಎರಡೂ ಪಕ್ಷಗಳನ್ನು ಕಾನೂನಿನ ಅನುಸಾರವಾಗಿ ಕೇಳುವ ಮೂಲಕ ಆದಷ್ಟು ಬೇಗ ಹೊಸದಾಗಿ ತೀರ್ಮಾನವನ್ನು ನಿರ್ಧರಿಸಲು ಪ್ರಕರಣವನ್ನು ದಕ್ಷಿಣಕನ್ನಡ ಜಿಲ್ಲಾಧಿಕಾರಿಯವರ ನ್ಯಾಯಾಧೀಕರಣಕ್ಕೆ ಕಳುಹಿಸಿದ್ದು, ಇದರ ಇತ್ಯರ್ಥದ ನಂತರ ನಿರ್ಮಾಣ ಕಾರ್ಯ ಪ್ರಾರಂಭವಾಗಲಿದೆ. **ಕಲಬುರ್ಗಿಯಲ್ಲಿ ಹಜ್ ಭವನದ ನಿರ್ಮಾಣ :** ಕಲ್ಬುರ್ಗಿಯಲ್ಲಿ ಹಜ್‌ಘರ್ ನಿರ್ಮಾಣಕ್ಕಾಗಿ ಕಲ್ಬುರ್ಗಿ ತಾಲ್ಲೂಕಿನ ಹಾಗರಗ ಗ್ರಾಮದ ಸರ್ಕಾರಿ ಸರ್ವೆ ನಂ 315 ರಲ್ಲಿ 5-00 ಎಕರೆ ಸರ್ಕಾರಿ ಜಮೀನನ್ನು ಹಜ್ ಭವನ ನಿರ್ಮಾಣಕ್ಕಾಗಿ 2014-15ನೇ

		ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಹೆಸರಿನಲ್ಲಿ ಕಾಯ್ದಿರಿಸಿ, ಜಿಲ್ಲಾಧಿಕಾರಿಗಳು, ಕಲ್ಬುರ್ಗಿಜಿಲ್ಲೆ, ಕಲ್ಬುರ್ಗಿ ಇವರು ಆದೇಶವನ್ನು ಹೊರಡಿಸಿರುತ್ತಾರೆ. ಕಲ್ಬುರ್ಗಿಯಲ್ಲಿ ಹಜ್ ಭವನದ ನಿರ್ಮಾಣ ಕಾರ್ಯವು ಸರ್ಕಾರದ ವತಿಯಿಂದ ನೀಡಲಾಗುವ ಅನುದಾನದಿಂದ ಪ್ರಾರಂಭವಾಗಲಿದೆ.
ಆ.	ಈ ಹಜ್ ಭವನಗಳಿಂದ ರಾಜ್ಯ ಸರ್ಕಾರಕ್ಕೆ ಎಷ್ಟು ಆದಾಯ ಬರುತ್ತಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)	ಹಜ್ ಭವನಗಳಿಂದ ಯಾವುದೇ ಆದಾಯ ಇರುವುದಿಲ್ಲ
ಇ	ಈ ಹಜ್ ಭವನಗಳನ್ನು ಯಾವ ರೀತಿಯಾಗಿ ಬಳಕೆ ಮಾಡಲಾಗುತ್ತಿದೆ; ಈ ಭವನಗಳು ಒಂದು ಜಾತಿಯವರಿಗೆ ಮಾತ್ರವೇ. ಬೋರ್ಡಿಂಗ್ ಮತ್ತು ಲಾಡ್ಜಿಂಗ್ ವ್ಯವಸ್ಥೆ ನೀಡುವ ಹೋಟೆಲ್ ಆಗುತ್ತಿರುವ ಕುರಿತು ಸರ್ಕಾರದ ನಿಲುವೇನು?	<u>ಬೆಂಗಳೂರಿನ ಹಜ್ ಭವನದಲ್ಲಿ ಕೋವಿಡ್ ಕೇರ್ ಸೆಂಟರ್</u> ಸರ್ಕಾರದ ಆದೇಶ ಸಂಖ್ಯೆ MWD 15 WHJ 2020 ದಿನಾಂಕ 01-04-2020 ರಲ್ಲಿ ಹಜ್ ಭವನವನ್ನು ಕೋವಿಡ್-19 ನಿಮಿತ್ತ ಕ್ವಾರಂಟೇನ್ ಸೆಂಟರ್ ಆಗಿ ಪ್ರಾರಂಭಿಸಲ್ಪಟ್ಟಿದ್ದು, ಎಲ್ಲಾ ಜಾತಿಗಳ ಸುಮಾರು 1500 ವ್ಯಕ್ತಿಗಳ (ಸುಮಾರು 200 ಜೈಲಿನ ಅಪರಾಧಿಗಳು ಸೇರಿದಂತೆ) ಯೋಗಕ್ಷೇಮದ ಕುರಿತು ಕಾಳಜಿ ವಹಿಸಲಾಗಿರುತ್ತದೆ. ಕೋವಿಡ್-19 ಪ್ರಕರಣಗಳು ರಾಜ್ಯದಲ್ಲಿ ಹೆಚ್ಚಾಗುತ್ತಿರುವ ದೃಷ್ಟಿಯಿಂದ, ಬೆಂಗಳೂರಿನ ಹಜ್ ಭವನವನ್ನು ಕ್ವಾರಂಟೈನ್ ಕೇಂದ್ರವನ್ನು ಕೋವಿಡ್‌ಕೇರ್ ಸೆಂಟರ್ (CCC) ಆಗಿ ಪರಿವರ್ತಿಸಿ. ದಿನಾಂಕ:23-06-2020 ರಿಂದ ಜಾರಿಗೆ ಬರುವಂತೆ 400 ಹಾಸಿಗೆ ಸೌಲಭ್ಯ ಹೊಂದಿರುವ ಕೋವಿಡ್ ಕೇರ್ ಸೆಂಟರ್ ಅನ್ನು ಕಾರ್ಯರೂಪಕ್ಕೆ ತರಲಾಗಿರುತ್ತದೆ. ದಿನಾಂಕ 27-11-2020 ರವರೆಗೆ ಕೋವಿಡ್‌ಕೇರ್ ಸೆಂಟರ್ ಅಸ್ತಿತ್ವದಲ್ಲಿದ್ದು, ಸುಮಾರು 5000 ವ್ಯಕ್ತಿಗಳ ಯೋಗಕ್ಷೇಮದ ಕುರಿತು ಕಾಳಜಿ ವಹಿಸಲಾಗಿರುತ್ತದೆ ಮತ್ತು ಹಜ್ ಭವನದ ಕೋವಿಡ್‌ಕೇರ್ ಸೆಂಟರ್‌ನಲ್ಲಿ ಎಲ್ಲಾ ಜಾತಿ/ವರ್ಗಗಳ ವ್ಯಕ್ತಿಗಳು ಅನೇಕ ಸೌಲಭ್ಯಗಳನ್ನು ಪಡೆದು, ಎಲ್ಲಾ ಭಾಗಗಳಿಂದ ಮೆಚ್ಚುಗೆಯನ್ನು ವ್ಯಕ್ತಪಡಿಸಿರುತ್ತಾರೆ. ಅಲ್ಲದೇ, ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ವಕ್ಫ್ ಪರಿಷತ್ತು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ಪ್ರತಿಷ್ಠಾನ ಹಾಗೂ ಕರ್ನಾಟಕ ರಾಜ್ಯ ಉರ್ದು ಅಕಾಡೆಮಿಗಳ ಕಛೇರಿಗಳನ್ನು ಈಗಾಗಲೇ ಹಜ್ ಭವನಕ್ಕೆ ಸ್ಥಳಾಂತರಿಸಿರುತ್ತದೆ. ಮುಂದುವರೆದು. ಹಜ್ ಭವನದಲ್ಲಿ ಕರ್ನಾಟಕ ವಕ್ಫ್‌ಮಂಡಳಿಯ ವತಿಯಿಂದ ವಕ್ಫ್ ಟ್ರೇನಿಂಗ್ ಸಂಸ್ಥೆಗಾಗಿ ಈಗಾಗಲೇ ಜಾಗವನ್ನು (ಕಛೇರಿ, ನಾಲ್ಕು ತರಬೇತಿ ಸಭಾಂಗಣ, ಬೋರ್ಡಿಂಗ್ ಮತ್ತು ಲಾಡ್ಜಿಂಗ್ ವ್ಯವಸ್ಥೆ ಸೇರಿದಂತೆ) ನೀಡಲಾಗಿದ್ದು, ಸದರಿ ಸಂಸ್ಥೆಯು ಸಧ್ಯದಲ್ಲಿಯೇ ಪ್ರಾರಂಭಗೊಳ್ಳಲಿದೆ.

		ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆಯ ಅಡಿಯಲ್ಲಿರುವ ಅಲ್ಪಸಂಖ್ಯಾತರ ನಿರ್ದೇಶನಾಲಯದ ವತಿಯಿಂದ ಐಎಎಸ್, ಐಪಿಎಸ್, ಕೆಎಎಸ್ ಹಾಗೂ ಇನ್ನಿತರೇ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಕುರಿತು ಸರ್ಕಾರದ ಚಿಂತನೆಯಿದ್ದು, ಇದನ್ನು ಹೊರತುಪಡಿಸಿ ರಾಜ್ಯ/ಜಿಲ್ಲಾ ಸೆಮಿನಾರ್, ಸಮ್ಮೇಳನಗಳನ್ನು ಆಯೋಜಿಸಲು ಸಹ ಚಿಂತನೆ ಇರುತ್ತದೆ.

ಸಂಖ್ಯೆ: **MWD 48 LMQ 2021**

(ಆನಂದ್ ಸಿಂಗ್)
ಮೂಲಸೌಲಭ್ಯ ಅಭಿವೃದ್ಧಿ ಹಾಗೂ
ಹಜ್ ಮತ್ತು ವಕ್ಫ್ ಸಚಿವರು